RNU AIR DHARWAD

JUNE 20, 2025

# AKASHAVANI - DHARWAD
# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಸಚಿವ ಸಂಪುಟ ಸಭೆ: ಉತ್ತರಕನ್ನಡ ಜಿಲ್ಲೆ, 'ಅಪ್ಸರಕೊಂಡ ಮುಗಲಿ ಕಡಲ ವನ್ಯ ಜೀವಿಧಾಮ' ಘೋಷಣೆ.**
- **ನಾಳೆ, 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ; ರಾಜ್ಯಾದ್ಯಂತ ಯೋಗ ಪ್ರದರ್ಶನಕ್ಕೆ, ಜಿಲ್ಲಾಡಳಿತಗಳ ಸಿದ್ಧತೆ.**
- **ಬೆಂಗಳೂರಿನ, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ, ಇಂದು ಮತ್ತು ನಾಳೆ, ವಿಪತ್ತು ನಿರ್ವಹಣೆ ರಾಷ್ಟ್ರೀಯ ಕಾರ್ಯಾಗಾರ.**
- **ವಿಶ್ವ, ಸಿಕೆಲ್ ಸೆಲ್ ರಕ್ತಹೀನತೆ, ಜನ ಜಾಗ್ರತಿ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಉತ್ತರಕನ್ನಡ ಜಿಲ್ಲೆ, ಹೊನ್ನಾವರ ಸಮುದ್ರ ತೀರದ, 6 ಕಿಲೋ ಮೀಟರ್ ಪ್ರದೇಶ ಹಾಗೂ ಅರಣ್ಯ ಭೂಮಿ ಒಳಗೊಂಡು, ಒಟ್ಟು 5 ಸಾವಿರದ 9 ನೂರಾ 59 ಹೆಕ್ಟರ್ ಪ್ರದೇಶವನ್ನು, 'ಅಪ್ಸರಕೊಂಡ ಮುಗಲಿ ಕಡಲ ವನ್ಯ ಜೀವಿಧಾಮ' ಎಂದು ಘೋಷಿಸಲು, ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ಸಭೆ ಜರುಗಿತು. ಸಂಸದೀಯ ವ್ಯವಹಾರಗಳ ಖಾತೆ ಸಚಿವ, ಎಚ್.ಕೆ. ಪಾಟೀಲ, ಬಳಿಕ ಸಭೆಯ ವಿವರ ನೀಡಿದರು.**

<><><>

**ಬೀದರ್ ಜಿಲ್ಲೆ, ಬಸವ ಕಲ್ಯಾಣದ ನೂತನ ಅನುಭವ ಮಂಟಪ ನಿರ್ಮಾಣ ಕಾಮಗಾರಿಯ, 742 ಕೋಟಿ ರೂಪಾಯಿ ಪರಿಷ್ಕೃತ ಅಂದಾಜಿಗೆ, ಆಡಳಿತಾತ್ಮಕ ಅನುಮೋದನೆ,**

<><><>

**ರಾಯಚೂರು ಜಿಲ್ಲೆ, ಲಿಂಗಸಗೂರು ತಾಲೂಕಿನ ಶಿಲಹಳ್ಳಿ ಗ್ರಾಮದ ಬಳಿ, ಕೃಷ್ಣ ನದಿಯ ಉಪ ನದಿಗೆ, ಸೇತುವೆ ನಿರ್ಮಾಣ ಹಾಗೂ ಚನ್ನಬಸವೇಶ್ವರ ಏತ ನೀರಾವರಿ ಯೋಜನೆ ಅಡಿ, ತುಂಗಭದ್ರಾ ನದಿಗೆ ಅಡ್ಡಲಾಗಿ, ವಿಯರ್ ನಿರ್ಮಿಸುವ 43 ಕೋಟಿ 10 ಲಕ್ಷ ರೂಪಾಯಿ ಕಾಮಗಾರಿಗೆ, ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.**

<><><>

ಹುಬ್ಬಳ್ಳಿ ನಗರದ ರಾಜನಾಲಾಕ್ಕೆ, ತಡೆಗೋಡೆ ನಿರ್ಮಿಸಲು, ಒಟ್ಟು 23 ಕೋಟಿ 51 ಲಕ್ಷ ರೂಪಾಯಿ ಕಾಮಗಾರಿಗಳಿಗೆ, ಸಚಿವ ಸಂಪುಟ ಸಭೆ, ಆಡಳಿತಾತ್ಮಕ ಅನುಮೋದನೆ ನೀಡಿದೆ.

<><><>

ಕೊಪ್ಪಳ ಜಿಲ್ಲೆ ಕು ್ಟಗಿ ತಾಲೂಕಿನ ಆರ್ಯಭೋಗಪುರ ಗ್ರಾಮದ ಬಳಿ, ಮಸ್ಕಿ ನಾಲೆಯ ಮೇಲ್ಭಾಗದಲ್ಲಿ, ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸಲು ಮತ್ತು ಕನಕ ನಾಲಾ ಆಧುನೀಕರಣ ಯೋಜನೆ, 134 ಕೋಟಿ 56 ಲಕ್ಷ ರೂಪಾಯಿ ಕಾಮಗಾರಿಗೆ ಅನುಮೋದನೆ, ದೊರೆತಿದೆ.

<><><>

ಯೋಗ ದಿನದ ಜಿಂಗಲ್ – 30 ಸೆಕೆಂದುಗಳು

<><><>

'ಒಂದೇ ಭೂಮಿ, ಒಂದೇ ಆರೋಗ್ಯಕ್ಕಾಗಿ,ಯೋಗ' ಧ್ಯೇಯದೊಂದಿಗೆ, ಆಯುಷ್ ಇಲಾಖೆ 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು, ನಾಳೆ ರಾಜ್ಯಾದ್ಯಂತ ಆಯೋಜಿಸಿದೆ.

<><><>

ನಾಳೆ ಬೆಳಗ್ಗೆ, 6 ಗಂಟೆ 45 ನಿಮಿಷಕ್ಕೆ, ಧಾರವಾಡದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಆಯೋಜಿತ, ಸಾಮೂಹಿಕ ಯೋಗಾಭ್ಯಾಸ ಕಾರ್ಯಕ್ರಮಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಚಾಲನೆ ನೀಡಲಿದ್ದಾರೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ, ಗಣ್ಯರು ಪಾಲ್ಗೊಳ್ಳಲಿದ್ದು, ಶಾಸಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸಲಿದ್ದಾರೆ.

<><><>

ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ, ನಾಳೆ ಬೆಳಗ್ಗೆ, 6 ಗಂಟೆ 45 ನಿಮಿಷಕ್ಕೆ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಯೋಜಿತವಾಗಿದೆ. 4 ಸಾವಿರಕ್ಕೂ ಅಧಿಕ ಯೋಗ ಪಟುಗಳು ಭಾಗವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ಸಾಮೂಹಿಕ ಯೋಗ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ ಎಂದು, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ತಿಳಿಸಿದ್ದಾರೆ.

<><><>

ಕಲಬುರಗಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ, ಬೆಳಗ್ಗೆ 7 ಗಂಟೆಗೆ ಆಯೋಜಿತ, ಯೋಗ ದಿನಾಚರಣೆಯಲ್ಲಿ, ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಪಾಲ್ಗೊಳ್ಳಲಿದ್ದಾರೆ.

<><><>

ಗದಗ ನಲ್ಲಿ ಆಯೋಜಿಸಿದ್ದ, ಯೋಗ ನಡಿಗೆ ಕಾರ್ಯಕ್ರಮಕ್ಕೆ, ಪರಿಷತ್ ಶಾಸಕ ಎಸ್.ವಿ ಸಂಕನೂರ ಹಾಗೂ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಚಾಲನೆ ನೀಡಿದರು.

<><><>

ಬೆಂಗಳೂರಿನ ಜೀವ ರಕ್ಷಾ ಟ್ರಸ್ಟ್‌ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ವಿವಿಧ ಸಂಸ್ಥೆಗಳ ಸಹಯೋಗದಲ್ಲಿ, ಇಂದು ಮತ್ತು ನಾಳೆ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ, ಜೆ.ಎನ್. ಟಾಟಾ ಸಭಾಂಗಣದಲ್ಲಿ, ವಿಪತ್ತು ನಿರ್ವಹಣೆ ರಾಷ್ಟ್ರೀಯ ಕಾರ್ಯಾಗಾರ ಆಯೋಜಿಸಿದೆ. ಕಾರ್ಯಾಗಾರದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಜೀವ ರಕ್ಷಾ ಟ್ರಸ್ಟ್, ಸಹ ಸ್ಥಾಪಕ ಹಾಗೂ ವಿಶ್ವಸ್ಥ ಡಾಕ್ಟರ್ ವಿಜಯ ಭಾಸ್ಕರ ರೆಡ್ಡಿ.

<><><>

ಡಾ. ವಿಜಯಭಾಸ್ಕರ ರೆಡ್ಡಿ ಧ್ವನಿ 45 ಸೆಕೆಂದುಗಳು

<><><>

ನಾಗರಿಕ ರಕ್ಷಣಾ ಪಡೆಗೆ ಸೇರ ಬಯಸುವವರು, ಜಾಲತಾಣ, www.civildefencewarriors.gov.in ಮತ್ತು ಮೊಬೈಲ್ ಆಪ್ – CD warriors ಮೂಲಕ, ತಮ್ಮ ಹೆಸರು, ನೊಂದಾಯಿಸಬಹುದು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

'ಜಾಗತಿಕ ಕ್ರಿಯೆ, ಸ್ಥಳೀಯ ಪರಿಣಾಮ; ಪರಿಣಾಮಕಾರಿ ಸ್ವಯಂ ವಾದ ಮಂಡನೆಗಾಗಿ, ಸಮುದಾಯಗಳನ್ನು ಸಬಲೀಕರಿಸೋಣ' ಎಂಬ ಧ್ಯೇಯದೊಂದಿಗೆ, ವಿಶ್ವ ಸಿಕೆಲ್ ಸೆಲ್ ರಕ್ತಹೀನತೆ ಜಾಗ್ರತಿ ದಿನವನ್ನು,ಆಚರಿಸಲಾಯಿತು. ಐದು ವರ್ಷದೊಳಗಿನ ಮಕ್ಕಳು, ಸಿಕೆಲ್ ಸೆಲ್ ಎನಿಮಿಯಾ ರೋಗ ಬಾಧೆಯಿಂದ ಬಳಲುವುದನ್ನು ತಡೆದು, ಪಾಲಕರಲ್ಲಿ ಜಾಗೃತಿ ಮೂಡಿಸಲು, ಈ ದಿನ ಮೀಸಲಿದೆ. ಸಿಕೆಲ್ ಸೆಲ್ ಎನಿಮಿಯಾ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ –ಕೆ.ಎಂ.ಸಿ. – ಆರ್.ಐ. ಮಕ್ಕಳ ಚಿಕಿತ್ಸಾ ವಿಭಾಗದ, ಪ್ರಾಧ್ಯಾಪಕ ಡಾಕ್ಟರ್ ವಿನೋದ ರಟಗೇರಿ.

<><><>

ಡಾಕ್ಟರ್ ವಿನೋದ ರಟಗೇರಿ ಧ್ವನಿ 45 ಸೆಕೆಂದುಗಳು

<><><>

ರಾಜ್ಯಾದ್ಯಂತ ಮಾದಕ ವಸ್ತುಗಳ ಬಳಕೆ ಮತ್ತು ಮಾರಾಟವನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಲು, ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ, ಪರೀಕ್ಷೆ ನಡೆಸಲು, ಅಗತ್ಯ ಸೌಲಭ್ಯ ಒದಗಿಸಲಾಗುವುದು ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಸಚಿವರು, ಮಾದಕ ವಸ್ತುಗಳ ಪರೀಕ್ಷೆಗೆ, ಬೆಂಗಳೂರಿಗೆ ಮಾದರಿ ಕಳುಹಿಸಿ, ವರದಿಗಾಗಿ ಕಾಯುವ ಬದಲು, ಜಿಲ್ಲಾ ಮಟ್ಟದಲ್ಲಿ ಪರೀಕ್ಷೆ ಕೈಗೊಳ್ಳುವಂತಾದರೆ, ಅನುಕೂಲ. ದಕ್ಷಿಣಕನ್ನಡ ಜಿಲ್ಲೆಯ ಆಸ್ಪತ್ರೆಯಲ್ಲಿ, ಮಾದರಿ ಪರೀಕ್ಷಾ ಘಟಕ ಆರಂಭಿಸಲಾಗುವುದು ಎಂದರು. ಶಿಕ್ಷಣ ಸಂಸ್ಥೆಗಳು, ಯುವಜನತೆಯೊಂದಿಗೆ ಆಪ್ತ ಸಮಾಲೋಚನೆಗಾಗಿ, ನೋಡಲ್ ವ್ಯಕ್ತಿ ನೇಮಿಸಿ, ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು, ಸರ್ಕಾರದ ಹಂತದಲ್ಲಿ ಕ್ರಮ ಕೈಗೊಳ್ಳಲಾಗುವುದು, ಎಂದು ಸಚಿವರು ಹೇಳಿದರು.

<><><>

ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ, ದು ್ಪರಿಣಾಮಗಳ ಬಗ್ಗೆ, ಮಕ್ಕಳ ಗ್ರಾಮ ಸಭೆಯಲ್ಲಿ ಜಾಗೃತಿ ಮೂಡಿಸುವಂತೆ, ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಸೂಚಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ, ನಾರ್ಕೋ ಸಮನ್ವಯ ಕೇಂದ್ರದ, ಜಿಲ್ಲಾ ಸಮಿತಿ ಸಭೆಯ, ಅಧ್ಯಕ್ಷತೆ ವಹಿಸಿ ಮಾತನಾಡಿದರು.

<><><>

ಕೇಂದ್ರದ ಗೃಹ ಖಾತೆ ಸಚಿವ, ಅಮಿತ್ ಶಾ ಬೆಂಗಳೂರಿಗೆ ಆಗಮಿಸಿದ್ದು, ಇಂದು, ನೆಲಮಂಗಲದ ಬಿ.ಜಿ.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಕಟ್ಟಡವನ್ನು, ಉದ್ಘಾಟಿಸಲಿದ್ದಾರೆ. ಬಡ ಜನರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿರುವ, ಬಿ.ಜಿ.ಎಸ್. ಆಸ್ಪತ್ರೆಯನು, 930 ಹಾಸಿಗೆಗಳ ಬಹು ವಿಶೇ ’ ಆಸ್ಪತ್ರೆಯನ್ನಾಗಿ ವಿಸ್ತರಿಸಲಾಗಿದೆ. ನೂತನ ಆಸ್ಪತ್ರೆ, ವಿಶೇ ’ ತೀವ್ರ ನಿಗಾ ಘಟಕ ಹಾಗೂ ಅತ್ಯಾಧುನಿಕ ವೈದ್ಯಕೀಯ ಸೇವೆ ಒದಗಿಸಲಿದೆ. ಸಮಾರಂಭದಲ್ಲಿ ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ, ವಿ.ಸೋಮಣ್ಣ, ಸಚಿವ ಶರಣಪ್ರಕಾಶ ಪಾಟೀಲ ಸ್ಥೆರಿದಂತೆ, ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

ಬಳ್ಳಾರಿ ತಾಲೂಕು, ಹಂದಿಹಾಳು ಗ್ರಾಮದ, ಸರ್ಕಾರಿಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ, ಡಾಕ್ಟರ್ ಶಿವಲಿಂಗಪ್ಪ ಹಂದಿಹಾಳು ಅವರ, ಮಕ್ಕಳ ಕಥಾ ಸಂಕಲನ 'ನೋಟ್ ಬುಕ್' ಕೃತಿಗೆ, 2025ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾದೆಮಿಯ, ಬಾಲ ಸಾಹಿತ್ಯ ಪುರಸ್ಕಾರ ಪ್ರಟಕವಾಗಿದೆ. ಪ್ರದೇಶ ಸಮಾಚಾರಕ್ಕಾಗಿ, ಶಿವಲಿಂಗಪ್ಪ ಹಂದಿಹಾಳು, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಶಿವಲಿಂಗಪ್ಪ ಹಂದಿಹಾಳು ಧ್ವನಿ 28 ಸೆಕೆಂದುಗಳು

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಖ್ಯಾತ ವನ್ಯಜೀವಿ ತಜ್ಞ, ಪದ್ಮಶ್ರೀ ಪುರಸ್ಕೃತ, ಅರಣ್ಯ ಋಷಿ, ಮಾರುತಿ ಚಿತಂಪಳ್ಳಿ ಅವರು, ಮಹಾರಾಷ್ಟ್ರದ ಸೋಲಾಪುರದಲ್ಲಿ, ವಯೋಸಹಜ ಕಾಯಿಲೆಯಿಂದ, ನಿಧನರಾಗಿದ್ದಾರೆ.

<><><>

ತುಂಗಭದ್ರಾ ಕಾಲುವೆಗೆ ಕೂಡಲೇ ನೀರು ಹರಿಸುವಂತೆ, ನೀರಾವರಿ ಸಲಹಾ ಸಮಿತಿ ಸಭೆ ಕರೆಯುವಂತೆ ಆಗ್ರಹಿಸಿ, ರೈತ ಸಂಘದ ಮುಖಂಡರು, ಬಳ್ಳಾರಿಯಲ್ಲಿ ಪ್ರತಿಭಟನೆ ನಡೆಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಸಚಿವ ಸಂಪುಟ ಸಭೆ: ಉತ್ತರಕನ್ನಡ ಜಿಲ್ಲೆ, 'ಅಪ್ಸರಕೊಂಡ ಮುಗಲಿ ಕಡಲ ವನ್ಯ ಜೀವಿಧಾಮ' ಘೋಷಣೆ.
- ನಾಳೆ, 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ; ರಾಜ್ಯಾದ್ಯಂತ ಯೋಗ ಪ್ರದರ್ಶನಕ್ಕೆ, ಜಿಲ್ಲಾಡಳಿತಗಳ ಸಿದ್ಧತೆ.

- ಬೆಂಗಳೂರಿನ, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ, ಇಂದು ಮತ್ತು ನಾಳೆ, ವಿಪತ್ತು ನಿರ್ವಹಣೆ ರಾಷ್ಟ್ರೀಯ ಕಾರ್ಯಾಗಾರ.
- ವಿಶ್ವ, ಸಿಕೆಲ್ ಸೆಲ್ ರಕ್ತಹೀನತೆ, ಜನ ಜಾಗ್ರತಿ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>